ಸಮಸ್ಯೆ ಪರಿಹರಿಸದ ಅಧಿಕಾರಿಗಳಿಗೆ ಧ್ರುವ ತರಾಟೆ

ಮೈಸೂರು ಜಿಪಂನಲ್ಲಿ ಸಂಸದರಿಂದ ಜಿಲ್ಲಾ ಅಭಿವೃದ್ಧಿ ಸಮನ್ವಯ-ಉಸ್ತುವಾರಿ ಸಮಿತಿ ಸಭೆ

ಮೈಸೂರಿನ ಜಿಪಂ ಸಭಾಂಗಣದಲ್ಲಿ ಸಂಸದ ಆರ್.ಧ್ರುವನಾರಾಯಣ ಮಂಗಳವಾರ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆ ನಡೆಸಿದರು. ಜಿಪಂ ಅಧ್ಯಕ್ಷೆ ನಯಿಮಾ ಸುಲ್ತಾನ್, ಜಿಲ್ಲಾಧಿಕಾರಿ ಡಿ.ರಂದೀಪ್, ಸಿಇಒ ಪಿ.ಶಿವಶಂಕರ್ ಚಿತ್ರದಲ್ಲಿದ್ದಾರೆ.

೪ ವರ್ಷದಿಂದ ತಜ್ಞ ವೈದ್ಯ ನಾಪತ್ತೆ..!

ನಂಜನಗೂಡು ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯರಿಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಆದರೆ, ಅಲ್ಲಿನ ತಜ್ಞ ವೈದ್ಯ ಮಾತ್ರ ೪ ವರ್ಷಗಳಿಂದ ನಾಪತ್ತೆಯಾಗಿದ್ದರೂ ಸಂಬಳ ಪಡೆಯುತ್ತಿದ್ದಾರೆ.

–ಮಹದೇವಪ್ಪ, ನಂಜನಗೂಡು ತಾಪಂ ಅಧ್ಯಕ್ಷ.

ಆರೋಗ್ಯ ಸಮಸ್ಯೆಯಿಂದಾಗಿ ಸಚಿವರ ಅನುಮತಿ ಮೇರೆಗೆ ಫಿಜಿಷಿಯನ್ ಆಸ್ಪತ್ರೆಯಲ್ಲಿದ್ದಾರೆ.

–ಬಿ.ಬಸವರಾಜು, ಡಿಎಚ್‌ಒ.

ಹಾಗಿದ್ದರೆ ಅವರನ್ನು ಕೇಂದ್ರ ಕಚೇರಿಗೆ ವರ್ಗಾಯಿಸಿ, ಬೇರೊಬ್ಬರನ್ನು ಅವರ ಸ್ಥಾನಕ್ಕೆ ನೇಮಿಸಿ. ಜನರ ಸಮಸ್ಯೆಗೆ ಸ್ಪಂದಿಸುವ ಸಿಬ್ಬಂದಿ ನೇಮಕ ಮಾಡಿ. ತಿಂಗಳಿಗೊಮ್ಮೆಯಾದರೂ ತಾಲ್ಲೂಕು ಆಸ್ಪತ್ರೆಗಳಿಗೆ ನೀವು ಭೇಟಿ ನೀಡಿ ಪರಿಶೀಲಿಸಿ. ಆಗ ಅಲ್ಲಿನ ಸಮಸ್ಯೆ ನಿಮಗೂ ಅರಿವಾಗುತ್ತದೆ.

–ಆರ್.ಧ್ರುವನಾರಾಯಣ, ಸಂಸದರು

ಮೈಸೂರು,ಸೆ.೧೨– ಕಾಡಾನೆ ಹಾವಳಿ, ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ, ಶಾಲೆಗಳಲ್ಲಿ ಶೌಚಾಲಯವಿಲ್ಲ ಎಂಬಿತ್ಯಾದಿ ಸಮಸ್ಯೆಗಳನ್ನು ಪರಿಹರಿಸದ ಅಧಿಕಾರಿಗಳನ್ನು ಸಂಸದ ಆರ್.ಧ್ರುವನಾರಾಯಣ ತರಾಟೆಗೆ ತೆಗೆದುಕೊಂಡರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ ಸಭೆ ನಡೆಸಿದ ಅವರು, ಮೊರಾರ್ಜಿ ಶಾಲೆಗಳ ಪ್ರಗತಿ ಪರಿಶೀಲಿಸಿದರು. ಈ ವೇಳೆ ಕಳೆದ ತಿಂಗಳು ತಿ.ನರಸೀಪುರದ ಸೋಸಲೆಯಲ್ಲಿ ಮೊರಾರ್ಜಿ ಶಾಲೆ ಉದ್ಘಾಟನೆಗೆ ನನ್ನನ್ನೇ ಆಹ್ವಾನಿಸಿಲ್ಲವೆಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕಿ ಪ್ರಭಾ ವಿರುದ್ಧ ಗರಂ ಆದರು. ಶಿಷ್ಟಾಚಾರ ಉಲ್ಲಂಘಿಸಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ತಾಕೀತು ಮಾಡಿದರು.

ಜಿಲ್ಲೆಯ ೨೧೭ ಹಾಡಿಗಳಲ್ಲಿ ೧೯ ಮನೆಗಳಿಗೆ ವಿದ್ಯುತ್ ಇಲ್ಲದಿರುವ ವಿಷಯ ತಿಳಿದು, ಯಾವುದೇ ಹಾಡಿಯಲ್ಲೂ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಂಡು ಕಾಡಿನೊಳಗೆ ಸೋಲಾರ್ ದೀಪ ಅಳವಡಿಸಲು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆಯಡಿ ಕ್ರಮ ಕೈಗೊಳ್ಳಬೇಕಿದೆ. ಈ ಸಂಬಂಧ ಅರಣ್ಯಾಧಿಕಾರಿಗಳು ಸಹ ಕೆಲವೆಡೆ ಅನುಮತಿ ನೀಡದಿರುವ ಬಗ್ಗೆ ತಿಳಿದು ಬಂದಿದೆ. ಕೂಡಲೇ ವಿದ್ಯುತ್ ಅಳವಡಿಸಲು ಅನುಮತಿ ನೀಡಿ, ನಿಮ್ಮಿಂದಾಗಿ ಯೋಜನೆ ಅನುಷ್ಠಾನ ವಿಳಂಬವಾಗಬಾರದು ಎಂದರು.

ಅರಣ್ಯ ವಾಚ್‌ಮನ್‌ಗಳನ್ನು ಹೆಚ್ಚಿಸಿ: ನಂಜನಗೂಡು ತಾಪಂ ಅಧ್ಯಕ್ಷ ಮಹದೇವಪ್ಪ ಮಾತನಾಡಿ, ನನ್ನದೇ ೧೦ ಎಕರೆ ಬಾಳೆ ಬೆಳೆ ಆನೆ ದಾಳಿಗೆ ತುತ್ತಾಯಿತು. ಪರಿಹಾರಕ್ಕೆ ದಾಖಲೆ ಸಹಿತ ಅರ್ಜಿ ಸಲ್ಲಿಸಿ ವರ್ಷವಾದರೂ ಪರಿಹಾರ ಸಿಗುತ್ತಿಲ್ಲ ಎಂದು ಅಲವತ್ತುಕೊಂಡರು. ಈ ಬಗ್ಗೆ ಪ್ರತಿಕ್ರಿಯಿಸಿದ ಸಂಸದರು, ನಂಜನಗೂಡು ಹಾಗೂ ಎಚ್.ಡಿ.ಕೋಟೆ ಭಾಗಗಳ ಕಾಡಂಚಿನ ಗ್ರಾಮಗಳಲ್ಲಿ ಆನೆ ಹಾವಳಿ ಹೆಚ್ಚಾಗಿದ್ದು, ಏನು ಕ್ರಮ ಕೈಗೊಂಡಿದ್ದೀರಿ ಎಂದು ಅರಣ್ಯಾಧಿಕಾರಿಗಳನ್ನು ಪ್ರಶ್ನಿಸಿದರು.

ಇದಕ್ಕೆ ಅರಣ್ಯಾಧಿಕಾರಿಗಳು, ಕಾಡಂಚಿನ ಗ್ರಾಮಗಳಲ್ಲಿ ರೈಲ್ವೇ ಕಂಬಿಯ ಗ್ರಿಲ್ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದೆ. ರೈಲ್ವೆ ಇಲಾಖೆಯಿಂದ ಇನ್ನಷ್ಟು ಕಂಬಿಗಳನ್ನು ಪಡೆಯುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

ಇದಕ್ಕೆ ಒಪ್ಪದ ಸಂಸದರು, ನೀವು ಕಾಮಗಾರಿ ಮುಗಿಸಲು ೬ ತಿಂಗಳಾದರೂ ಆಗುತ್ತದೆ. ಅಲ್ಲಿಯವರೆಗೆ ಹೆಚ್ಚಿನ ಸಿಬ್ಬಂದಿ ನೇಮಿಸಿ. ಒಂದು ಎಕರೆ ಬೆಳೆ ಬೆಳೆಯುವುದು ಎಷ್ಟು ಕಷ್ಟ ಅಂತ ಗೊತ್ತಾ ನಿಮಗೆ? ಎಂದು ಪ್ರಶ್ನಿಸಿದರು. ಹೆಡಿಯಾಲ ಆರ್‌ಎಫ್‌ಒ ಸರಿಯಾಗಿ ಕೆಲಸ ಮಾಡಲ್ಲ ಎಂಬ ದೂರಿದೆ. ಈ ರೀತಿಯಾದರೆ ಪಿಸಿಸಿಎಫ್ ಅವರಿಗೆ ಬರೆದು ತನಿಖೆ ಮಾಡಿಸಬೇಕಾಗುತ್ತದೆ ಎಂದು ಧ್ರುವ ಎಚ್ಚರಿಸಿದರು.

೧೦ಕ್ಕಿಂತ ಕಡಿಮೆ ಬರಲಿ: ಶೈಕ್ಷಣಿಕವಾಗಿ ಕಳೆದ ಬಾರಿ ಮೈಸೂರು ಜಿಲ್ಲೆ ಫಲಿತಾಂಶದಲ್ಲಿ ಕುಸಿತ ಕಂಡ ಹಿನ್ನೆಲೆಯಲ್ಲಿ ಡಿಡಿಪಿಐ ಬಸಪ್ಪ ಅವರನ್ನು ವರ್ಗಾಯಿಸಲಾಯಿತು. ಹಾಗಾಗಿ ನೀವು ಹೊಸ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಜಿಲ್ಲೆಯನ್ನು ಶೈಕ್ಷಣಿಕವಾಗಿ ೧೦ನೇ ಸ್ಥಾನಕ್ಕಿಂತ ಒಳಗೆ ತನ್ನಿ. ಇಲ್ಲದಿದ್ದರೆ ನಿಮ್ಮ ಮೇಲೆಯೇ ಕ್ರಮ ಕೈಗೊಳ್ಳಲಾಗುವುದು ಎಂದು ಸಂಸದ ಧ್ರುವನಾರಾಯಣ ಶಿಕ್ಷಣ ಇಲಾಖೆ ಉಪನಿರ್ದೇಶಕರಿಗೆ ಎಚ್ಚರಿಕೆ ನೀಡಿದರು.

ಉಳಿದಂತೆ ಸಂಸದರು ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ, ಆಯುಷ್, ಶಿಕ್ಷಣ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ನಿಗಮ–ಮಂಡಳಿಗಳು ಸೇರಿದಂತೆ ೩೬ ಇಲಾಖೆಗಳಲ್ಲಿನ ಕೇಂದ್ರ ಪುರಸ್ಕೃತ ಯೋಜನೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಶಾಸಕ ಕಳಲೆ ಕೇಶವಮೂರ್ತಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ನಯಿಮಾ ಸುಲ್ತಾನ, ಜಿಲ್ಲಾ ಪಂಚಾಯಿತಿ ಸಿಇಒ ಪಿ.ಶಿವಶಂಕರ್ ಸೇರಿದಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ದಸರಾ: ಮಕ್ಕಳಿಗಾಗಿ ಸ್ಪರ್ಧೆ

ಮೈಸೂರು,ಸೆ.೧೨– ನಾಡಹಬ್ಬ ದಸರಾದ ಅಂಗವಾಗಿ ಟಿ.ಕೆ.ಬಡಾವಣೆಯಲ್ಲಿರುವ ಕಾಂಗೂರ್ ಕಿಡ್ಸ್ ಇಂಟರ್‌ನ್ಯಾಷನಲ್ ೩ರಿಂದ ೫ ವರ್ಷದೊಳಗಿನ ಮಕ್ಕಳಿಗೆ ಫ್ಯಾನ್ಸಿ ಡ್ರೆಸ್, ೧ರಿಂದ ೩ ವರ್ಷದೊಳಗಿನ ಆರೋಗ್ಯಯುತ ಮಗು ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಸೆ. ೧೫ರೊಳಗೆ ದೂ.ಸಂ.೦೮೨೧–೨೯೭೩೩೬೬/ ೯೧೦೮೬೫೬೬೪೪ ಸಂಪರ್ಕಿಸಬಹುದು.

ಸಾಲ ಮನ್ನಾ ಮಾಡಿಸಲಿಲ್ಲ ಅಂದ್ರೆ ಬಿಜೆಪಿ ತಿರಸ್ಕರಿಸಿ

ಬಳ್ಳಾರಿಯಲ್ಲಿ ರಾಜ್ಯದ ಜನತೆಗೆ ಸಿಎಂ ಸಿದ್ದರಾಮಯ್ಯ ಕರೆ

ಬಳ್ಳಾರಿ,ಸೆ.೧೨–ರಾಜ್ಯ ಸರ್ಕಾರ ಸಹಕಾರ ಬ್ಯಾಂಕ್‌ಗಳಲ್ಲಿರುವ ರೈತರ ಸಾಲಮನ್ನಾ ಮಾಡಿದೆ. ಬಿ.ಎಸ್.ಯಡಿಯೂರಪ್ಪ ಕೇಂದ್ರದ ಸಾಲ ಮನ್ನಾ ಮಾಡಿಸಲಿಲ್ಲ ಅಂದ್ರೆ ಬಿಜೆಪಿಯನ್ನು ತಿರಸ್ಕರಿಸಿ ಎಂದು ರಾಜ್ಯದ ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಬಳ್ಳಾರಿಯಲ್ಲಿ ಮಂಗಳವಾರ ನಡೆದ ಸರ್ಕಾರದ ಸಾಧನಾ ಸಮಾವೇಶದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಅಧಿಕಾರಕ್ಕೆ ಬಂದು ನಾಳೆಗೆ ೪ ವರ್ಷ ೪ ತಿಂಗಳಾಗುತ್ತದೆ. ೨೯೬೦ ಕೋಟಿ ರೂ. ಗಳ ಅಭಿವೃದ್ಧಿ ಕಾರ್ಯಕ್ರಮ ಇದೇ ಮೊದಲನೇ ಬಾರಿಗೆ ನಡೀತಿದೆ ಎಂದರು.

ನಿಮ್ಮ ಆಶೀರ್ವಾದ ಇಂದು ನಾನು ಸಿಎಂ ಆಗಿದ್ದೀನಿ. ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆಗಳಲ್ಲಿ ಶೇ.೯೦ರಷ್ಟು ಈಡೇರಿಸುವ ಕೆಲಸ ಮಾಡಿದ್ದೇವೆ. ೧.೨೫ ಕೋಟಿ ಜನರಿಗೆ ಉಚಿತವಾಗಿ ಅಕ್ಕಿ ಕೊಡ್ತಾ ಇದ್ದೇವೆ. ಗುಜರಾತ್ ಬಿಟ್ಟರೆ ಕರ್ನಾಟಕವೇ ಅತಿ ಹೆಚ್ಚು ಹಾಲು ಉತ್ಪಾದಕ ರಾಜ್ಯ ಅನ್ನೋ ಹೆಗ್ಗಳಿಕೆ ಪಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದಲಿತರಿಗೆ ಕನ್ಯೆ ಕೊಡಿ: ರಾಷ್ಟ್ರೀಕೃತ ಬ್ಯಾಂಕುಗಳ ಸಾಲ ಮನ್ನಾ ಮಾಡಿ. ನಾನು ರಾಜ್ಯದ ಸೊಸೈಟಿಗಳಲ್ಲಿ ನೀಡಿದ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳಿದ್ದೆ. ಅಂತೆಯೇ ಸಾಲ ಮನ್ನಾ ಮಾಡಿದ್ದೇನೆ. ಯಡಿಯೂರಪ್ಪ ಕೇಂದ್ರದ ಸಾಲ ಮನ್ನಾ ಮಾಡಿಸಲಿಲ್ಲ ಅಂದ್ರೆ ಬಿಜೆಪಿಯನ್ನು ತಿರಸ್ಕರಿಸಿ ಎಂದು ಜನತೆಗೆ ಕರೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ದಲಿತರ ಮನೆಯಲ್ಲಿ ತಿಂಡಿ ತಿನ್ನುವ ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ದಲಿತರಿಗೆ ಏನು ಮಾಡಿದ್ರಿ? ದಲಿತರ ಬಗ್ಗೆ ಪ್ರೀತಿ ಇದ್ದರೆ ದಲಿತರಿಗೆ ಕನ್ಯೆ ಕೊಡಿ ಎಂದು ಸವಾಲು ಹಾಕಿದರು.

ಸಿಬಿಐಗೆ ಕೊಡುವ ಪ್ರಶ್ನೆಯೇ ಇಲ್ಲ: ಗೌರಿ ಲಂಕೇಶ್ ಹತ್ಯೆ ಪ್ರಕರಣ ಸಿಬಿಐಗೆ ಕೊಡಲು ನಮ್ಮ ಅಭ್ಯಂತರವಿಲ್ಲ. ಆದರೆ, ಅವರ ಕುಟುಂಬವು ಒತ್ತಾಯಿಸಿಲ್ಲ. ಹೀಗಾಗಿ ಪ್ರಕರಣವನ್ನು ಸಿಬಿಐಗೆ ಕೊಡುವ ಪ್ರಶ್ನೆಯೇ ಇಲ್ಲ. ರಾಜ್ಯ ಪೊಲೀಸರಿಂದಲೇ ತನಿಖೆ ನಡೆಯಲಿದೆ. ಬಿಜೆಪಿ ಸಿಬಿಐ ಅನ್ನು ಚೋರ್ ಬಚಾವ್ ಸಂಸ್ಥೆ ಎನ್ನುತಿತ್ತು. ದಾಭೋಲ್ಕರ್ ಕೇಸನ್ನು ಸಿಬಿಐ ತನಿಖೆ ನಡೆಸುತ್ತಿದೆ. ಆದ್ರೆ ಸಿಬಿಐ ತನಿಖೆ ಪ್ರಗತಿ ಏನಾಗಿದೆ ಎಂದು ಲೇವಡಿ ಮಾಡಿದರು.

ಮೈಸೂರು ವಿವಿಯಲ್ಲಿ ವಿಧಾನಸಭೆಯ ಕಾಗದ ಪತ್ರಗಳ ಸಮಿತಿ ಅಧ್ಯಕ್ಷ ಸಾ.ರಾ.ಮಹೇಶ್ ಸಭೆ

ವಿವಿ ಲೆಕ್ಕಪತ್ರ ಸಲ್ಲಿಕೆಗೆ ಅಂತಿಮ ಗಡುವು

ಕರ್ನಾಟಕ ವಿಧಾನಸಭೆ ಕಾಗದ ಪತ್ರಗಳ ಸಮಿತಿ ಅಧ್ಯಕ್ಷ ಸಾ.ರಾ.ಮಹೇಶ್ ಅವರು ಮೈಸೂರು ವಿವಿ ಆಡಳಿತ ಭವನದಲ್ಲಿ ಲೆಕ್ಕಪತ್ರಗಳ ಕುರಿತು ಸಭೆ ನಡೆಸಿದರು. ಸದಸ್ಯ ಕೃಷ್ಣಾರೆಡ್ಡಿ, ಗಣೇಶ್, ಪ್ರೊ.ಜೆ.ಸೋಮಶೇಖರ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ೫ ಕೋಟಿ ರೂ. ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ೬ ಕೋಟಿ ರೂ.ಗಳಷ್ಟು ಹಣವನ್ನು ಸಂಬಂಧಪಟ್ಟವರಿಂದ ವಸೂಲು ಮಾಡಿರುವುದು ತೃಪ್ತಿ ತಂದಿದೆ. ಉಳಿದ ಮೊತ್ತವನ್ನೂ ಆದಷ್ಟು ಬೇಗ ವಸೂಲು ಮಾಡಬೇಕು.

-ಸಾ.ರಾ.ಮಹೇಶ್

ಮೈಸೂರು,ಸೆ.೧೨– ಮೈಸೂರು ವಿಶ್ವವಿದ್ಯಾನಿಲಯ ಮತ್ತು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಗಳಿಗೆ ಲೆಕ್ಕ ಪತ್ರಗಳ ಸಲ್ಲಿಕೆಗೆ ಕರ್ನಾಟಕ ವಿಧಾನಸಭೆಯ ಕಾಗದ ಪತ್ರಗಳ ಸಮಿತಿ ಅಧ್ಯಕ್ಷ ಸಾ.ರಾ.ಮಹೇಶ್ ಕೊನೆಯ ಗಡುವು ನೀಡಿದರು.

ಮೈಸೂರು ವಿವಿ ಆಡಳಿತ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಅಗತ್ಯ ಲೆಕ್ಕಪತ್ರಗಳ ಸಲ್ಲಿಕೆಗೆ ಈಗಾಗಲೇ ಮೂರು ಬಾರಿ ಸಭೆ ಮಾಡಿ ಗಡುವು ನೀಡಲಾಗಿದ್ದರೂ ಲೆಕ್ಕಪತ್ರಗಳನ್ನು ಸಮಿತಿಗೆ ಒಪ್ಪಿಸಿಲ್ಲ. ಇದು ಕೊನೆಯ ಸಭೆ. ಇನ್ನೇನಿದ್ದರೂ ಲೆಕ್ಕಪತ್ರ ನೀಡಿಲ್ಲ ಎಂದು ವಿಧಾನಸಭೆಯ ಅಧ್ಯಕ್ಷರಿಗೆ ವರದಿ ಕೊಡುತ್ತೇನೆ ಎಂದು ಎಚ್ಚರಿಕೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರಾದ ಡಿ.ಭಾರತಿ, ಹೊಸದಾಗಿ ಈ ಹುದ್ದೆಗೆ ಬಂದಿದ್ದೇನೆ. ೨೦೧೩–೧೪ನೇ ಸಾಲಿನ ಲೆಕ್ಕಪತ್ರಗಳ ಲೆಕ್ಕಪರಿ ಶೋಧನೆ ಆಗಿದೆ. ೨೦೧೪–೧೫ನೇ ಸಾಲಿನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಈ ತಿಂಗಳ ಅಂತ್ಯಕ್ಕೆ ಪೂರ್ಣಗೊಳ್ಳುತ್ತದೆ. ೨೦೧೫–೧೬ನೇ ಸಾಲಿನದ್ದು ಇನ್ನೂ ಲೆಕ್ಕಪತ್ರ ಪರಿಶೋಧನೆಯಾಗಿಲ್ಲ. ಪೂರ್ಣಗೊಂಡಿರುವ ಲೆಕ್ಕಪತ್ರಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯ ಬೇಕು. ಇದಕ್ಕೆ ಕನಿಷ್ಠ ಡಿಸೆಂಬರ್ ಅಂತ್ಯದವರೆಗೆ ಸಮಯ ಬೇಕು ಎಂದು ಮನವಿ ಮಾಡಿದರು.

ಈ ಮನವಿಗೆ ಸ್ಪಂದಿಸಿದ ಸಾ.ರಾ.ಮಹೇಶ್ ಅವರು, ಡಿಸೆಂಬರ್ ಮೊದಲ ವಾರದ ಒಳಗೆ ಲೆಕ್ಕಪತ್ರ ಸಲ್ಲಿಸುವಂತೆ ಹೇಳಿದರು.

ಸಂಬಳ ನೀಡಿಲ್ಲದಿರುವುದಕ್ಕೆ ಆಕ್ರೋಶ: ವಾಸ್ತುಶಿಲ್ಪ ವಿಭಾಗದ ನೇಮಕಾತಿ ಅಕ್ರಮವಾಗಿದ್ದು, ಈ ಸಂಬಂಧ ವಿಚಾರಣೆ ನಡೆಯುತ್ತಿದೆ ಎಂಬ ಅಂಶ ಸಭೆಯಲ್ಲಿ ಬೆಳಕಿಗೆ ಬಂದಿತು. ಈ ವಿಭಾಗದ ಸಿಬ್ಬಂದಿಗೆ ಎರಡು ತಿಂಗಳಾದರೂ ವೇತನ ನೀಡದಿರುವುದಕ್ಕೆ ಸಾ.ರಾ.ಮಹೇಶ್ ಸಭೆಯಲ್ಲಿ ಕಿಡಿಕಾರಿದರು.

ಸಿಬ್ಬಂದಿ ನೇಮಕ ಮಾಡಿಕೊಳ್ಳುವಾಗ ಸರ್ಕಾರದಿಂದ ಅನುಮತಿ ಪಡೆದಿಲ್ಲ. ಈ ಕುರಿತು ವಿಚಾರಣೆ ನಡೆಯುತ್ತಿದೆ. ಇದಕ್ಕೆ ಬಿಲ್ ಮಾಡದೇ ಸಂಬಳವನ್ನು ತಡೆ ಹಿಡಿಯಲಾಗಿತ್ತು ಎಂದು ಹಣಕಾಸು ಅಧಿಕಾರಿ ವಿವರಣೆ ನೀಡಿದರು.

ಇವರ ಉತ್ತರಕ್ಕೆ ತೃಪ್ತರಾಗದ ಸಾ.ರಾ. ಮಹೇಶ್, ಸರ್ಕಾರದಿಂದ ಅನುಮತಿ ಪಡೆಯದೇ ಇರುವುದು ನಿಮ್ಮ ತಪ್ಪು. ನೇಮಕಾತಿ ಅಕ್ರಮ ಎಂಬುದು ಸಾಬೀತಾಗುವವರೆಗೂ ಅವರಿಗೆ ವೇತನ ನೀಡಬೇಕು. ಅವರಿಂದ ಕೆಲಸ ಮಾಡಿಸಿಕೊಂಡು ಸಂಬಳ ನೀಡದೇ ಇದ್ದರೆ ಅವರು ಜೀವನ ಮಾಡುವುದು ಹೇಗೆ ಎಂದು ಪ್ರಶ್ನಿಸಿದರು. ಇದಕ್ಕೆ ಭಾರತಿ ಅವರು ಪ್ರತಿಕ್ರಿಯಿಸಿ, ಶನಿವಾರವಷ್ಟೇ ಎಲ್ಲ ಸಿಬ್ಬಂದಿಗೂ ವೇತನ ನೀಡಲಾಗಿದೆ ಎಂದು ತಿಳಿಸುವ ಮೂಲಕ ಚರ್ಚೆಯನ್ನು ಮುಕ್ತಾಯಗೊಳಿಸಿದರು.

ಸಭೆಗೆ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ದಯಾನಂದ ಮಾನೆ ಗೈರಾಗಿರುವುದಕ್ಕೆ ಸಮಿತಿ ಅಧ್ಯಕ್ಷ ಸಾ.ರಾ.ಮಹೇಶ್ ಸಿಟ್ಟಾದರು. ಈ ವೇಳೆ ಕುಲಸಚಿವರಾದ ಭಾರತಿ ಅವರು, ಮಾನೆ ಅವರ ಆರೋಗ್ಯ ಸರಿಯಿಲ್ಲ. ಭಾನುವಾರವಷ್ಟೇ ಆಸ್ಪತ್ರೆಯಿಂದ ಮನೆಗೆ ಹೋಗಿದ್ದಾರೆಂದು ಉತ್ತರಿಸಿದರು.

ಅವರು ಹಿಂದಿನ ಸಭೆಗೂ ಬಂದಿರಲಿಲ್ಲ. ಮುಂದಿನ ಬಾರಿ ಅವರಿಗೆ ಸಮಯ ಸಿಕ್ಕಾಗ, ಆರೋಗ್ಯ ಸರಿ ಇದ್ದಾಗ ತಿಳಿಸಿ ಆ ದಿನವೇ ಸಭೆ ಮಾಡುತ್ತೇನೆ ಎಂದು ಸಾ.ರಾ.ಮಹೇಶ್ ತಿಳಿಸಿದರು.

ಸಮಿತಿ ಸದಸ್ಯ ಕೃಷ್ಣಾರೆಡ್ಡಿ, ವಿಧಾನಸಭೆ ಕಾರ್ಯದರ್ಶಿ ಗಣೇಶ್, ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಜೆ.ಸೋಮಶೇಖರ್ ಮುಂತಾದವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸುಡೊಕು-೮೪೯

			೯				೧	೬
	೬				೮			೯
		೪	೨	೭	೬		೮	
೨						೪		೭
೮	೩						೯	
			೬	೨	೯			
೬		೭	೮	೩				
				೯		೬		೧
			೧			೩	೫	

ಆಡುವುದು ಹೇಗೆ ?

ಮನೆಗಳನ್ನು ೧ರಿಂದ ೯ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

೮೪೮ರ ಉತ್ತರ

೯	೨	೪	೬	೮	೧	೭	೩	೫
೬	೭	೩	೯	೨	೫	೪	೮	೧
೧	೫	೮	೩	೪	೭	೨	೬	೯
೮	೩	೫	೧	೭	೪	೬	೯	೨
೪	೯	೧	೮	೬	೨	೩	೫	೭
೨	೬	೭	೫	೩	೯	೮	೧	೪
೫	೮	೨	೪	೯	೩	೧	೭	೬
೭	೧	೬	೨	೫	೮	೯	೪	೩
೩	೪	೯	೭	೧	೬	೫	೨	೮

ಮೆಕ್ಸಿಕೋದ ಕುತೂಹಲಕಾರಿ, ನಿಗೂಢ ಗುಹೆಗಳು

ಹೌದಾ!

ಅತ್ಯಂತ ರೋಚಕ, ಕುತೂಹಲಕಾರಿ ಗುಹೆಗಳನ್ನು ಮೆಕ್ಸಿಕೋದಲ್ಲಿ ಕಾಣಬಹುದು. ಇಲ್ಲಿರುವ ಗುಹೆಗಳು ಒಂದಕ್ಕಿಂತ ಒಂದು ಸುಂದರವಾಗಿವೆ. ಈ ಗುಹೆಗಳನ್ನು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಲಾಗಿದೆ. ಈ ಗುಹೆಗಳ ಒಳಗೆ ಹೋದರೆ ಹೊಸದೊಂದು ಅನುಭವವೇ ಸಿಗುತ್ತದೆ ಎಂದು ಈ ಗುಹೆಗಳ ಒಳಗೆ ಹೋಗಿ ಬಂದ ಪ್ರವಾಸಿಗಳು ಹೇಳುತ್ತಾರೆ. ಈ ಗುಹೆಗಳಿಗೆ ಮೆಕ್ಸಿಕೋ ಸರ್ಕಾರ ಹೆಚ್ಚಿನ ಭದ್ರತೆ ಒದಗಿಸಿದೆ.

ಗುಹೆಯ ಒಳಗಿನ ರಚನೆಗಳು ಜನರನ್ನು, ಪ್ರವಾಸಿಗರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುವಲ್ಲಿ ಯಶಸ್ವಿಯಾಗಿವೆ. ಆದರೂ, ಗುಹೆಗಳ ಒಳಗೆ ಕೆಲವು ವ್ಯಕ್ತಿಗಳ ಕಣ್ಮರೆಯಾಗುವ ವಿಷಯ ಮಾತ್ರ ಇನ್ನೂ ನಿಗೂಢವಾಗಿಯೇ ಉಳಿದಿದೆ.

ರಾಕ್‌ಲೈನ್‌ಗೆ 'ಅರ್ಜುನ ರೆಡ್ಡಿ' ರಿಮೇಕ್ ಹಕ್ಕು



ತೆಲುಗಿನ ಯಶಸ್ವಿ ಚಿತ್ರ 'ಅರ್ಜುನ ರೆಡ್ಡಿ' ಕನ್ನಡಕ್ಕೆ ರಿಮೇಕ್ ಆಗಲಿದೆ. ವಿಜಯ ಸಾಯ್ ದೇವರಕೊಂಡ ಅಭಿನಯದ 'ಅರ್ಜುನ ರೆಡ್ಡಿ' ಕನ್ನಡ ರಿಮೇಕ್ ಹಕ್ಕನ್ನು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಖರೀದಿಸಿದ್ದಾರೆ. ಆದರೆ ಎಷ್ಟು ಕೋಟಿ ರೂ.ಗಳಿಗೆ ಖರೀದಿಯಾಗಿದೆ ಎಂಬುದರ ಬಗ್ಗೆ ಮಾತ್ರ ಮಾಹಿತಿಯಿಲ್ಲ.

ತಮಿಳಿನ ರಿಮೇಕ್ ರೈಟ್ಸ್ ರಜನಿಕಾಂತ್ ಅವರ ಅಳಿಯ ಧನುಷ್ ಪಾಲಾಗಿದೆ. ವಿಜಯ್ ಸಾಯ್ ದೇವರಕೊಂಡ ಅಭಿನಯದ ಪಾತ್ರವನ್ನು ಕನ್ನಡದಲ್ಲಿ ಅಷ್ಟೇ ರಫ್ ಅಂಡ್ ಟಫ್ ಮತ್ತು ಭಾವನಾತ್ಮಕವಾಗಿ ಯಾರು ನಟಿಸಲಿದ್ದಾರೆ ಎಂಬುದನ್ನು ಮಾತ್ರ ನಿರ್ಮಾಪಕರು ಬಹಿರಂಗಪಡಿಸಿಲ್ಲ.

ಅದೇ ಸಮಯದಲ್ಲಿ ಕನ್ನಡದಲ್ಲಿ ನಾಯಕನ ಪಾತ್ರಕ್ಕೆ ಯಾರು ಸೂಕ್ತ ನಟ ಎಂಬ ಪ್ರಶ್ನೆಗೆ ಎಲ್ಲರೂ ರಾಕಿಂಗ್ ಸ್ಟಾರ್ ಯಶ್ ಕಡೆ ಕೈ ತೋರಿಸುತ್ತಿದ್ದಾರೆ. ಅರ್ಜುನ್ ರೆಡ್ಡಿ ಕಥೆಯನ್ನು ಬಹಳವಾಗಿ ಮೆಚ್ಚಿರುವ ರಾಕ್‌ಲೈನ್ ವೆಂಕಟೇಶ್, ಆ ಪಾತ್ರಕ್ಕೆ ಯಶ್‌ರಿಂದ ಮಾತ್ರ ನ್ಯಾಯ ಒದಗಿಸಲು ಸಾಧ್ಯ ಎಂದು ನಂಬಿದ್ದಾರೆ. ಹೀಗಾಗಿ ಅರ್ಜುನ್ ರೆಡ್ಡಿ ಪಾತ್ರದಲ್ಲಿ ಯಶ್ ನಟಿಸಲಿದ್ದಾರೆ ಎಂದು ಇಂಡಸ್ಟ್ರಿ ಮೂಲಗಳು ತಿಳಿಸಿವೆ.

ಆಧುನಿಕ ದೇವದಾಸ್ ಕಥೆ ಚಿತ್ರದಲ್ಲಿದೆ. ಮೂಳೆ ತಜ್ಞರೊಬ್ಬರ ಪ್ರೇಮ ವೈಫಲ್ಯದ ಕಥೆ ಇದಾಗಿದೆ. ಕಥೆಗೆ ರಫ್ ಅಂಡ್ ಟಫ್ ವ್ಯಕ್ತಿತ್ವದ ಅವಶ್ಯಕತೆಯಿದ್ದು, ಅದಕ್ಕೆ ಯಶ್ ಸೂಕ್ತ ಎಂಬುದು ಎಲ್ಲರ ಅಭಿಪ್ರಾಯ.

ಸದ್ಯ ಕೆಜಿಎಫ್ ಸಿನಿಮಾದಲ್ಲಿ ಯಶ್ ಬ್ಯುಸಿಯಾಗಿದ್ದಾರೆ. ಆ ನಂತರ ನಿರ್ದೇಶಕ ಹರ್ಷ ಅವರ ರಾಣಾ ಸಿನಿಮಾಗೂ ಸಹಿ ಮಾಡಿದ್ದಾರೆ. ಹೀಗಾಗಿ ಯಾವ ಶೂಟಿಂಗ್‌ನಲ್ಲಿ ಮೊದಲು ಭಾಗವಹಿಸಲಿದ್ದಾರೆ ಎಂಬುದನ್ನು ಕಾದು ನೋಡಬೇಕಿದೆ.

ರಾಕ್‌ಲೈನ್ ವೆಂಕಟೇಶ್ ಸದ್ಯ ಮೋಹನ್ ಲಾಲ್ ಅಭಿನಯನ ಮಲಯಾಳಂನ 'ವಿಲನ್' ಸಿನಿಮಾ ಬಿಡುಗಡೆಗಾಗಿ ಸಿದ್ಧತೆ ನಡೆಸುತ್ತಿದ್ದಾರೆ. ಜೊತೆಗೆ ಕನ್ನಡದ 'ವಿಐಪಿ' ಸಿನಿಮಾ ಬಿಡುಗಡೆಯತ್ತಲೂ ಅವರು ಮನಸ್ಸಿಟ್ಟಿದ್ದಾರೆ. ಅದಾದ ನಂತರ ಪ್ರಿಯಾ ನಿರ್ದೇಶನದ ನಿರುಪ್ ಭಂಡಾರಿ, ರಾಧಿಕಾ ಪಂಡಿತ್ ಅಭಿನಯದ ಮತ್ತೊಂದು ಸಿನಿಮಾಗಾಗಿ ವೆಂಕಟೇಶ್ ಮುಖ ಮಾಡಲಿದ್ದಾರೆ.

ಕಾರಣಾಂತರಗಳಿಂದ 'ದಾರಿದೀಪ' ಅಂಕಣವನ್ನು ಇಂದು ಪ್ರಕಟಿಸಲಾಗಿಲ್ಲ.

–ಸಂ.

ಮೊದಲನೇ ಪುಟದಿಂದ

ಅಭೂತಪೂರ್ವ #ನಾನು ಗೌರಿ

ಸಾಹಿತಿಗಳು, ವಿಚಾರವಾದಿಗಳು, ಪ್ರಗತಿಪರರು, ಬುದ್ಧಿಜೀವಿಗಳು, ಪತ್ರಕರ್ತರು ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಸಿ ಆರೋಪಿಗಳನ್ನು ಶೀಘ್ರವೇ ಬಂಧಿಸುವಂತೆ ಆಗ್ರಹಿಸಿದರು. ಯುವ ಜನರಂತೂ ಸಾಗರೋಪಾದಿಯಲ್ಲಿ ಹರಿದುಬಂದರು. ಯುವತಿಯರ ಸಂಖ್ಯೆಯೂ ದೊಡ್ಡದೇ ಇತ್ತು. ಇದಕ್ಕೂ ಮುನ್ನ ಶ್ರೀಜಯ ಮೃತ್ಯುಂಜಯ ಸ್ವಾಮೀಜಿ ಅವರು ತಮಟೆ ಬಾರಿಸುವ ಮೂಲಕ #ನಾನು ಗೌರಿ; ಪ್ರತಿರೋಧ ರ್‍ಯಾಲಿಗೆ ಚಾಲನೆ ನೀಡಿದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸೆಂಟ್ರಲ್ ಕಾಲೇಜುವರೆಗೆ ರಾಜ್ಯದ ವಿವಿಧೆಡೆಯಿಂದ ಸ್ವಯಂಪ್ರೇರಿತವಾಗಿ ಆಗಮಿಸಿದ್ದ ಸಹಸ್ರಾರು ಜನ ಗೌರಿ ಲಂಕೇಶ್ ಹತ್ಯೆಯನ್ನು ತೀವ್ರವಾಗಿ ಖಂಡಿಸಿ ದರಲ್ಲದೆ, ಒಕ್ಕೊರಲಿನಿಂದ ನ್ಯಾಯಕ್ಕಾಗಿ ಆಗ್ರಹಿಸಿದರು. ಆರೋಪಿಗಳನ್ನು ಬಲಿಹಾಕಬೇಕೆಂದು ಒತ್ತಾಯಿಸಿದರು. ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಗಾಗಿ ಘೋಷಣೆಗಳನ್ನು ಮೊಳಗಿಸಿದರು.

'ನಾನು ಗೌರಿ, ನಾವೆಲ್ಲರೂ ಗೌರಿ' ಎಂಬ ಭಿತ್ತಿಪತ್ರಗಳನ್ನು ಹಿಡಿದು ತಲೆಗೆ ಕಪ್ಪುಬಟ್ಟೆ ಕಟ್ಟಿದ್ದ ಪ್ರತಿಭಟನಾಕಾರರು ಕಪ್ಪುಕೊಡೆಗಳನ್ನು ಹಿಡಿದು ಗೌರಿ ಲಂಕೇಶ್ ಪರವಾದ ಘೋಷಣೆಗಳನ್ನು ಕೂಗುತ್ತಾ, ಕ್ರಾಂತಿಗೀತೆಗಳನ್ನು ಹಾಡುತ್ತಾ ಮೆರವಣಿಗೆಯಲ್ಲಿ ಸಾಗಿದರು.

ರಾಷ್ಟ್ರಮಟ್ಟದ ಹೋರಾಟಗಾರರು: ಖ್ಯಾತ ಪತ್ರಕರ್ತ ಪಿ.ಸಾಯಿನಾಥ್, ಸಿಪಿಎಂ ಮುಖಂಡ ಸೀತಾರಾಮ್ ಯೆಚೂರಿ, ಬಾಲಿವುಡ್ ನಿರ್ಮಾಪಕ ಆನಂದ್ ಪಟೂರಿ, ಪತ್ರಕರ್ತೆ ಸಿಸ್ತಾ ಸೆಟಲ್‌ವಾಡ್, ನರ್ಮದಾ ಬಚಾವೋ ಆಂದೋಲನ ಹೋರಾಟ ಗಾರ್ತಿ ಮೇಧಾ ಪಾಟ್ಕರ್, ಖ್ಯಾತ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಗಿರೀಶ್ ಕಾರ್ನಾಡ್, ಪ್ರಕಾಶ್ ರೈ, ನಾಗತಿಹಳ್ಳಿ ಚಂದ್ರಶೇಖರ್, ಹಿರಿಯ ಸಾಹಿತಿಗಳಾದ ದೇವನೂರ ಮಹಾದೇವ, ಬರಗೂರು ರಾಮಚಂದ್ರಪ್ಪ, ಸಿದ್ಧಾರ್ಥ ವರದರಾಜ್, ಮುರುಘಾ ಮಠದ ಶ್ರೀಮುರುಘ ರಾಜೇಂದ್ರ ಶರಣರು, ನಿಡುಮಾಮಿಡಿ ಮಠದ ಶ್ರೀವೀರಭದ್ರ ಚೆನ್ನಮಲ್ಲ ಸ್ವಾಮೀಜಿ, ವಿಮರ್ಶಕ ಕೆ.ಎಸ್.ಭಗವಾನ್, ರಾಜ್ಯಸಭಾ ಸದಸ್ಯ ರಾಜೀವ್‌ಗೌಡ, ಚಿಂತಕ ಜಿ.ಕೆ.ಗೋವಿಂದರಾವ್, ಖ್ಯಾತ ವಕೀಲ ಪ್ರಶಾಂತ್‌ಭೂಷಣ್, ಗುಜರಾತ್‌ನ ದಲಿತ ಹೋರಾಟಗಾರ ಜಿಗ್ನೇಶ್ ಮೇವಾನಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮಿನ್‌ಮಟ್ಟು, 'ಆಂದೋಲನ' ದಿನಪತ್ರಿಕೆ ಸಂಪಾದಕರಾದ ರಾಜಶೇಖರ ಕೋಟಿ, ಸಿದ್ದನಗೌಡ ಪಾಟೀಲ್, ಮಾರುತಿ ಮಾನ್ಪಡೆ, ಸಾಹಿತಿ ಕೆ.ಮರುಳಸಿದ್ದಪ್ಪ, ಕೆ.ಎಸ್.ವಿಮಲಾ, ಸಮಾಜ ಪರಿವರ್ತನಾ ಹೋರಾಟಗಾರ ಎಸ್.ಆರ್.ಹಿರೇಮಠ್ ಮತ್ತಿತರರು ಪಾಲ್ಗೊಂಡಿದ್ದರು.

ಲಂಕೇಶ್ ಕುಟುಂಬ: ಗೌರಿ ಲಂಕೇಶ್ ಅವರ ತಾಯಿ ಇಂದಿರಾ ಲಂಕೇಶ್, ಸಹೋದರಿ ಕವಿತಾ ಲಂಕೇಶ್ ಮತ್ತು ಅವರ ಪುತ್ರಿ ಭಾಗವಹಿಸಿದ್ದರು; ಆದರೆ, ಸಹೋದರ ಇಂದ್ರಜಿತ್ ಲಂಕೇಶ್ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಗೌರಿ ಲಂಕೇಶ್ ಕುರಿತು ೧೨ ಗೀತ ರೂಪಕಗಳನ್ನು ರಚಿಸಲಾಗಿದೆ. ರ್‍ಯಾಲಿಯುದ್ದಕ್ಕೂ ದಲಿತ ಸಂಘಟನೆಗಳು, ಮಹಿಳಾ ಸಂಘಟನೆಗಳವರು ತಮ್ಮ ಹಾಡು, ಕುಣಿತ ಮೂಲಕ ಗೌರಿ ಸಾವಿಗೆ ನ್ಯಾಯ ಕೇಳುತ್ತಿದ್ದರು.

ಕೈಜೋಡಿಸಿದ ೧೩೫ ಸಂಘಟನೆಗಳು: ಗೌರಿ ಹತ್ಯೆ ವಿರೋಧಿ ಹೋರಾಟ ವೇದಿಕೆ ವತಿಯಿಂದ ಹಮ್ಮಿಕೊಂಡಿದ್ದ ಈ ಬೃಹತ್ ಪ್ರತಿರೋಧ ಸಮಾ ವೇಶದಲ್ಲಿ ಕೋಮುಸೌಹಾರ್ದ ವೇದಿಕೆ, ಜನಶಕ್ತಿ ಕೇಂದ್ರ, ಎಸ್‌ಡಿಪಿಐ, ದಸಂಸ, ಅಲ್ಪಸಂಖ್ಯಾತರು, ವಿವಿಧ ಕಾರ್ಮಿಕ ಸಂಘಟನೆಗಳು, ಮಹಿಳಾ ಸಂಘಟನೆ, ಕಮ್ಯುನಿಸ್ಟ್ ಪಕ್ಷ, ಪ್ರಾಂತ ರೈತ ಸಂಘ ಸೇರಿದಂತೆ ೧೩೫ ಸಂಘಟನೆಗಳ ಕಾರ್ಯಕರ್ತರು ಸ್ವಯಂಪ್ರೇರಿತರಾಗಿ ಪಾಲ್ಗೊಂಡು ಗೌರಿ ಲಂಕೇಶ್ ಹತ್ಯೆಯನ್ನು ಖಂಡಿಸಿದರು. ಬೃಹತ್ ರ್‍ಯಾಲಿ ಮತ್ತು ಸಮಾವೇಶದಲ್ಲಿ ಪಾಲ್ಗೊಂಡು ಹಂತಕರನ್ನು ಶೀಘ್ರ ಪತ್ತೆ ಹಚ್ಚಿ ಶಿಕ್ಷಿಸುವಂತೆ ಆಗ್ರಹಿಸಿದರು. ವಿವಿಧ ಸಾಂಸ್ಕೃತಿಕ ತಂಡಗಳು, ಜಾನಪದ ತಂಡಗಳೊಂದಿಗೆ, ಭಜನೆ, ಬೀದಿ ನಾಟಕ, ಗೌರಿ ಪರವಾದ ಗೀತರೂಪಕಗಳನ್ನು ಹಾಡುತ್ತಾ ಮೆರವಣಿಗೆಯಲ್ಲಿ ಸಾಗಿ ಹಿರಿಯ ಪತ್ರಕರ್ತೆಯ ಹತ್ಯೆಯನ್ನು ಖಂಡಿಸಿದವು.

ಪ್ರೇರಕರನ್ನು ಶೀಘ್ರ ಪತ್ತೆ ಹಚ್ಚಿ

ಮಾತನಾಡುವವರ ಕತ್ತು ಹಿಚುಕುವ, ಬರೆಯುವ ಹಕ್ಕನ್ನು ಕಿತ್ತುಕೊಳ್ಳುವ, ನಮ್ಮ ಊಟ, ಭಾಷೆ ಸಂಸ್ಕೃತಿಗಳ ಮೇಲೆಯೂ ಒತ್ತಡ ಹೇರುವ, ನಮ್ಮ ಬಹುಮುಖಿ ಸಂಸ್ಕೃತಿಯನ್ನು ಏಕ ಸಂಸ್ಕೃತಿಗೆ ಇಳಿಸುವ, ಎಲ್ಲವನ್ನೂ ಬಂಡವಾಳಗಾರರಿಗೆ ಒಪ್ಪಿಸುತ್ತಾ ಬಂಡವಾಳ ಶಾಹಿ ಹಿಡಿತದಲ್ಲಿ ಉಸಿರಾಡುವ ಸರ್ಕಾರಗಳು ವಿಚಾರವಂತರ ಹತ್ಯೆಯ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಕಿಡಿಕಾರಿದರು.

ಒಂದೇ ರಾಷ್ಟ್ರ, ಒಂದೇ ಸಂಸ್ಕೃತಿ, ಒಂದೇ ಧರ್ಮ ಎಂದು ಬೊಬ್ಬೆ ಹೊಡೆಯುತ್ತ ಸಮಾಜದ ಕತ್ತು ಹಿಚುಕಲು ಬಯಸುವ ಮೂಲಭೂತವಾದಿಗಳ ಸಿದ್ಧಾಂತವನ್ನೇ ತನ್ನ ಸಿದ್ಧಾಂತ ಎಂದು ತಿಳಿದು ಅದರಂತೆ ನಡೆದುಕೊಳ್ಳುವ ಸರ್ಕಾರಗಳು ಜನಪರವಾಗಿ ಚಿಂತಿಸಲು ಸಾಧ್ಯವಿಲ್ಲ. ಈಗ ಕೇಂದ್ರದಲ್ಲಿರುವುದು ಈ ರೀತಿಯ ಸರ್ಕಾರವೇ ಆಗಿದೆ ಎಂದು ಟೀಕಿಸಿದರು.

ಖ್ಯಾತ ಪತ್ರಕರ್ತೆ, ಸಾಹಿತಿ ಹಾಗೂ ಪ್ರಗತಿಪರ ಚಿಂತಕರಾಗಿದ್ದ ಗೌರಿ ಲಂಕೇಶ್ ಅವರ ಹತ್ಯೆ ಪ್ರಜಾಪ್ರಭುತ್ವದ ಕಗ್ಗೊಲೆ. ಇದು ಪ್ರಗತಿಪರರ ಚಿಂತನೆ ನಾಶ ಮಾಡಿ ಭಯ ಹುಟ್ಟಿಸುವ ವಾತಾವರಣ ಸೃಷ್ಟಿಸುತ್ತಿದೆ. ಅನಾಗರಿಕ ಮತ್ತು ರಣಹೇಡಿಗಳ ವಿರುದ್ಧ ಹೋರಾಡುವ ಮನೋಭಾವ ನಮ್ಮಲ್ಲಿ ಮೂಡದೇ ಇದ್ದರೆ ಎಲ್ಲ ಪ್ರಗತಿಪರರನ್ನೂ ಕಳೆದುಕೊಳ್ಳುತ್ತೇವೆ.

–ಬಿ.ಶಿವಶಂಕರಮೂರ್ತಿ, ಅಧ್ಯಕ್ಷರು
ಪ್ರಗತಿಪರ ಚಿಂತಕರ ಸಂಘ

ನನ್ನ ಕುಟುಂಬ ನಾಶವಾಗಲಿ

ಶ್ರೀಗಳು ಹೇಳಿದ್ದನ್ನು ಬಿಜೆಪಿ ಮುಖಂಡ ವಿ.ಸೋಮಣ್ಣ, ಬಿ.ಎಸ್.ಯಡಿಯೂರಪ್ಪ ಅವರಿಗೆ ಅರಗಿಸಿಕೊಳ್ಳಲು ಆಗುತ್ತಿಲ್ಲ. ಹೀಗಾಗಿ ಶ್ರೀಗಳು ಹೇಳಿದ್ದನ್ನು ತಿರುಚುತ್ತಿದ್ದಾರೆ ಎಂದರು.

ನಾನು ಸುಳ್ಳು ಹೇಳಿದ್ದರೆ ಆ ಶಾಪ ನನ್ನ ಕುಟುಂಬಕ್ಕೆ ತಟ್ಟಲಿ. ನನ್ನ ಕುಟುಂಬ ಸರ್ವನಾಶವಾಗಲಿ. ತನ್ನ ತಾಯಿ, ಪತ್ನಿ, ಮಕ್ಕಳ ಸಮೇತ ಸಿದ್ಧಗಂಗಾ ಮಠಕ್ಕೆ ಹೋಗಿ ತಲೆ ತಗ್ಗಿಸಿ ಕೂರುತ್ತೇನೆ. ನಾನು ಸುಳ್ಳು ಹೇಳಿಲ್ಲ. ಸುದ್ದಿಗೋಷ್ಠಿ ಮಾಡುವಾಗ ಪ್ರಮಾಣ ಮಾಡಿ ಹೇಳಿದ್ದೆ. ನಾನು ಬಸವಣ್ಣನ ನಾಡಿನಿಂದ ಬಂದವನು. ಬಸವಣ್ಣನೊಂದಿಗಿನ ಪ್ರೀತಿ ಇವತ್ತಿನದಲ್ಲ ಎಂದರು.

ನಾನು ಹಾಗೂ ಬಸವರಾಜ ಹೊರಟ್ಟಿ ಸರ್ವನಾಶವಾಗುತ್ತೇವೆ ಎಂದು ಹೇಳಿಕೆ ನೀಡಿರುವ ಸ್ವಾಮೀಜಿಗಳ ವೀಡಿಯೋ ನನ್ನ ಬಳಿ ಇದೆ. ಅದರ ಬಗ್ಗೆ ದೂರು ನೀಡಿದರೆ ಸ್ವಾಮೀಜಿ ಜೈಲಿಗೆ ಹೋಗಬೇಕಾಗುತ್ತದೆ. ಆದರೆ ಆ ಕೆಲಸ ಮಾಡುವುದಿಲ್ಲ ಎಂದು ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ತ.ನಾಡು ಪೊಲೀಸರಿಂದ ಶೋಧ

ಈ ಬಗ್ಗೆ ತಮಿಳುನಾಡು ಪೊಲೀಸರು ಪಳನಿಯಪ್ಪನ್ ಕೊಡಗಿನಲ್ಲಿ ವಾಸ್ತವ್ಯ ಹೂಡಿರುವ ಮಾಹಿತಿ ಕಲೆ ಹಾಕಿದ್ದರು. ರೆಸಾರ್ಟ್ ಅನ್ನು ಸಂಜೆವರೆಗೆ ಜಾಲಾಡಿದರೂ ಪಳನಿಯಪ್ಪನ್ ಸಿಗದೇ ನಿರಾಸೆಯಿಂದ ಹಿಂತಿರುಗಿದ್ದಾರೆ. ಪಳನಿಯಪ್ಪನ್ ಪೊಲೀಸರ ದಾಳಿ ಮಾಹಿತಿ ಅರಿತು ಸೋಮವಾರವೇ ಇಲ್ಲಿಂದ ಕಾಲ್ಕಿತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡಿನ ನಾಮಗಲ್ ಕ್ರೈಂ ಬ್ರಾಂಚ್ ವಿಂಗ್ ಅಧಿಕಾರಿಗಳು ಸೇರಿದಂತೆ ಎಸ್‌ಪಿ, ಡಿವೈಎಸ್‌ಪಿ, ಎಸ್‌ಐ ಹಾಗೂ ಸಿಬ್ಬಂದಿ ಸೇರಿ ೨೫ ಮಂದಿ ತಂಡದಲ್ಲಿದ್ದರು. ಪಳನಿಯಪ್ಪನ್ ಪತ್ತೆಯಾಗದ ಕಾರಣ ಸುಂಟಿಕೊಪ್ಪ ಠಾಣೆಗೆ ಮಾಹಿತಿ ನೀಡಿ ಹಿಂತಿರುಗಿದ್ದಾರೆ.

ತಮಿಳುನಾಡು ಸರ್ಕಾರ ರಚನೆ ಸಂಬಂಧ ಕೊಡಗಿನಲ್ಲಿ ಬೀಡು ಬಿಟ್ಟಿರುವ ೧೭ ಶಾಸಕರು ಬುಧವಾರ ಬೆಳಿಗ್ಗೆ ತಮಿಳುನಾಡಿಗೆ ಹಿಂದಿರುಗಲಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.